'ದನ ಕಾಯೋಕೆ ಹೋಗಿದ್ದೆ'

ನನ್ನ ಮಗಳ ಭಾವನವರ ಮೂರು ವರ್ಷದ ಪುಟಾಣಿ ಸಿರಿ ಮಾತಿನ ಮಲ್ಲಿ. ಅವಳ ಮುಗ್ಧ, ಚಾಲಾಕಿತನದ ಮಾತುಗಳು ನಮ್ಮನ್ನು ನಗೆಗಡಲಿನಲ್ಲಿ ಮುಳುಗುವಂತೆ ಮಾಡುತ್ತವೆ. ಕಳೆದ ತಿಂಗಳು ನಾನು ಅವರ ಮನೆಗೆ ಹೋದಾಗ ಅವಳು ಮನೆಯಲ್ಲಿ ಇರಲಿಲ್ಲ. ನಾನು ಅವಳ ಅಜ್ಜಿ, ತಾತನ ಜೊತೆ ಮಾತನಾಡುತ್ತ ಕುಳಿತಿದ್ದೆ. ಸಂಜೆ ಏಳು ಗಂಟೆಗೆ ಅವಳು ಮನೆಗೆ ಬಂದಾಗ ನಾನು, 'ಏನು ಸಿರಿ ಎಲ್ಲಿಗೆ ಹೋಗಿದ್ದೆ? ಹಬ್ಬಕ್ಕೆ ಬಟ್ಟೆ ತರೋಕೆ ಹೋಗಿದ್ಯಾ?' ಎಂದು ಕೇಳಿದಾಗ ಅವಳು ಕೂಡಲೇ 'ಇಲ್ಲ ಆಂಟಿ, ನಾನು ದನ ಕಾಯೋಕೆ ಹೋಗಿದ್ದೆ' ಎಂದಳು! ಅವಳ ಮಾತಿಗೆ ನಾನು ತಬ್ಬಿಬ್ಬಾದೆ! ಆಗ ಅವಳ ತಾಯಿ ನಗುತ್ತಾ, 'ನಾವು ಯೋಗರಾಜ ಭಟ್ ನಿರ್ದೇಶನದ 'ದನ ಕಾಯೋನು' ಸಿನಿಮಾಕ್ಕೆ ಹೋಗಿದ್ವಿ ಆಂಟಿ, ಅದಕ್ಕೆ ಹೀಗೆ ಹೇಳ್ತಿದ್ದಾಳೆ' ಎಂದಾಗ ಎಲ್ಲರೂ ನಗಲಾರಂಭಿಸಿದರು.

ಶಾಂತಾ ನರಸಿಂಹಮೂರ್ತಿ

ಭಾಷೆಯ ಆವಾಂತರ

1961ರ ಸಮಯ. ನಾನು ಮಂಡ್ಯದಲ್ಲಿ ಎಸ್ಸೆಸ್ಸೆಲ್ಸಿ ಪಾಸು ಮಾಡಿಕೊಂಡು ಮುಂದಿನ ವಿದ್ಯಾಭ್ಯಾಸಕ್ಕಾಗಿ ಬಳ್ಳಾರಿಯಲ್ಲಿದ್ದ ನಮ್ಮ ಅಣ್ಣನ ಮನೆಗೆ ಹೋಗಿ ಅಲ್ಲಿ ಕಾಲೇಜಿಗೆ ಸೇರಿದ್ದೆ. ಆ ಕಾಲದಲ್ಲಿ ಬಳ್ಳಾರಿಯಲ್ಲಿ ಕುಡಿಯುವ ನೀರಿಗೆ ಬಹಳ ಅಭಾವವಿತ್ತು. ಒಂದು ಕೊಡ ನೀರು ತರಬೇಕು ಅಂದರೆ ಸುಮಾರು ಅರ್ಧ ಕಿಲೋಮೀಟರ್ ಇರುವ ಕ್ಯೂನಲ್ಲಿ ನಿಲ್ಲಬೇಕಿತ್ತು. ಹಾಗೆ ಒಂದು ದಿನ ಸರದಿಯಲ್ಲಿ ನಿಂತಿರುವಾಗ ನನ್ನ ಮುಂದೆ ನಿಂತಿದ್ದ ಹೆಂಗಸಿಗೆ, 'ಅಮ್ಮ, ನಿಮ್ಮ ಸರದಿ ಬಂತು ನೀರು ಹಿಡಿಯಿರಿ' ಎಂದೆ. ಅದಕ್ಕೆ ಆ ಹೆಂಗಸು 'ಯಾಕೆ ಮೈ ನೆಟ್ಟಗಿಲ್ಲೇನು' ಅಂದಳು. 'ನಾನೇನು ಅಂದೆ ನಿಮಗೆ? ಯಾಕಮ್ಮ ಇಷ್ಟು ಕೋಪ?' ಅಂದೆ. ಅದಕ್ಕೆ ಅವಳು, 'ಅದೆ ವದರಿತ್ತಿಯೇನ್ಲೆ ಬಡ್ಕಾವು' ಎಂದಳು. ನನಗೆ ಹೆದರಿಕೆಯಾಗಿ ಪುನಃ ಮಾತನಾಡದೆ ಮನೆಗೆ ಬಂದು ನಮ್ಮ ಅತ್ತಿಗೆಗೆ ವಿಷಯ ತಿಳಿಸಿದೆ. ಅವರು, 'ಇಲ್ಲಿ ಅಮ್ಮ ಅಂದರೆ ನಿಮ್ಮಪ್ಪನ ಹೆಂಡತಿಯೇನೊ' ಅಂತ ಕೇಳುತ್ತಾರೆ. ಹೆಂಗಸರಿಗೆ ಅವ್ವ ಎಂದು ಸಂಬೋಧಿಸಬೇಕು' ಎಂದರು. ಆನಂತರ ಎಂದೂ, ಯಾರನ್ನೂ ಅಮ್ಮ ಅಂತ ನಾನು ಕರಿಯಲಿಲ್ಲ!

ಎಲ್. ಮಂಜೇಗೌಡ